**ಸಾಕ್ಷಿಯನ್ನು ದಿಃ *01/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀಮತಿ ವಿಆರಎಂ ವಕೀಲರಿಂದ 5 ನೇ ಎದುರುದಾರರ ಪರವಾಗಿ.**

ದಿಃ13-01-2020 ರಂದು ನಾವು ಶಬರಿಮಲೈಗೆ ಹೋಗಿ ಮರಳಿ ಬರುವಾಗ ನಾನು ಹೋರಟಿದ್ದ ಟೆಂಪೋ ಬಸ್ಸು ಏರಿಕೆ ರಸ್ತೆಯಲ್ಲಿ ಹೋಗುವಾಗ ಕೇರಳ ಬಸ್ಸು ನಮಗೆ ಡಿಕ್ಕಿ ಪಡಿಸಿದ್ದು ಇರುತ್ತದೆ, ಸದರಿ ಬಸ್ಸಿನಿಂದ ಅಪಘಾತವಾಗಿರುತ್ತದೆ. ಸದರಿ ಅಪಘಾತ ಮದ್ಯಾಹ್ನ 12 ರಿಂದ 1 ಗಂಟೆ ಸುಮಾರಿಗೆ ಆಗಿರುತ್ತದೆ. ನಾನು ಪ್ರಯಾಣಿಸುತ್ತಿರುವ ಟೆಂಪೊ ನಂಬರ ನನಗೆ ಗೊತ್ತಿಲ್ಲ. ಕೇರಳ ಬಸ್ಸನ ನಂಬರ ಸಹ ನನಗೆ ಗೊತ್ತಿಲ್ಲ. ನಾನು ಅರ್ಜಿಯನ್ನು ಹಾಕಬೇಕಾದರೆ ಸದರಿ ನಂಬರಗಳನ್ನು ಕೊಟ್ಟಿಲ್ಲ ಎಂದರೆ ನಿಜ.

ಸದರಿ ಟೆಂಪೊನಲ್ಲಿ ದಿಃ07-01-2020 ರಂದು ಕೆಲಗೇರಿಯಿಂದ ಶಬರಿಮಲೈಗೆ ಹೋಗಿದ್ದೇವು. ಸದರಿ ಟೆಂಪೂ ನಮ್ಮ ಸ್ವಂತದ್ದು ಅಲ್ಲ. ಬಾಡಿಗೆ ಮಾಡಿಕೊಂಡು ಹೋಗಿರುವ ಕುರಿತು ದಾಖಲಾತಿ ಹಾಜರುಪಡಿಸಿಲ್ಲ. ಆದ್ದರಿಂದ ನಾನು ಸದರಿ ಟೆಂಪೊನಲ್ಲಿ ಶಬರಿಮಲೈಗೆ ಹೋಗಿರುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ನಿಜವಾಗಲೂ ಸದರಿ ಟೆಂಪೊನಲ್ಲಿ ಹೋಗಿದ್ದರೆ ಅದರ ಕುರಿತು ವಿವರಗಳು ನನಗೆ ಗೊತ್ತಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಬಾಡಿಗೆಯನ್ನು ನಾನು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಿನಾಂಕದಂದು ನಾವು ಒಟ್ಟು 11-12 ಜನ ಹೋಗಿದ್ದೇವು. ಎಷ್ಟು ಜನ ಪ್ರಯಾಣಿಸುತ್ತಿದ್ದೇವು ಎನ್ನುವ ಮಾಹಿತಿ ಸಹ ನನಗೆ ಇಲ್ಲ ಎಂದರೆ ಸರಿಯಲ್ಲ.

ಅಪಘಾತದ ಕುರಿತು ಯಾರು ದೂರನ್ನು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಕಾರಣ ನನಗೆ ಪ್ರಜ್ಞೆ ಇರಲಿಲ್ಲ. ನನಗೆ ಆರಾಮವಾದ ನಂತರ ಸಹ ನಾನು ಪೊಲೀಸಠಾಣೆಗೆ ಹೋಗಿ ದೂರು ನೀಡಿರುವುದಿಲ್ಲ. ಸದರಿ ಪ್ರ.ವ.ವ.ನಲ್ಲಿ ನನ್ನ ಹೆಸರು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವುಗಳನ್ನು ನಮ್ಮ ವಕೀಲರು ತರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಪ್ರ.ವ.ವ.ನಲ್ಲಿ ಬರೆದಿರುವ ವಿಷಯ ಸಂಗತಿ ನನಗೆ ಗೊತ್ತಿಲ್ಲ ಎಂದರೆ ನಿಜ. ಸದರಿ ಪ್ರ.ವ.ವ. ಮಳಿಯಾಳಿ ಭಾಷೆಯಲ್ಲಿದ್ದು ಅದರ ಭಾಷಾಂತರ ಕುರಿತು ಸಹ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿದಾರರು ಭಾಷಾಂತರ ನಮ್ಮ ವಕೀಲರು ಮಾಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನೇ ಹಾಜರುಪಡಿಸಿರುವ ದಾಖಲಾತಿ ಪ್ರಕಾರ ಟೆಂಪೊ ಚಾಲಕ ನನ್ನ ಟೆಂಪೊನಲ್ಲಿ ಪ್ರಯಾಣಿಸುತಿತದ್ದ 5 ಜನರಿಗೆ ಸಾದಾ ಸ್ವರೂಪದ ಗಾಯಗಳು ಆಗಿದ್ದು,

ಅವರುಗಳು ಅವರವರ ಮನೆಗೆ ಹೋಗಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಟೆಂಪೊ ಚಾಲಕ ನನ್ನ ಹೆಸರು ಹೇಳಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ವರದಿಯಲ್ಲಿ ಗಾಯಾಳು ಎಂದು ನನ್ನ ಹೆಸರು ಉಲ್ಲೇಖಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಯಾಣಿಕನಾಗಿ ಗಾಯಗಳನ್ನು ಮಾಡಿಕೊಂಡಿದ್ದರೆ ನನ್ನ ಹೆಸರು ಸಹ ಅಂತಿಮ ವರದಿಯಲ್ಲಿ ಬರುತ್ತಿತ್ತು, ನಾನು ಪ್ರಯಾಣ ಮಾಡಲಾರದ ಕಾರಣ ನನ್ನ ಹೆಸರು ಬಂದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ನಿ.ಪಿ.8 ರಂತೆ ಇರುವ ಗಾಯದ ಪ್ರಮಾಣಪತ್ರದಲ್ಲಿ ರವಿ ಎನ್ನುವವರ ಹೆಸರು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನಾನು ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ಧಾರವಾಡದ ಆಸ್ಪತ್ರೆಗೆ ಸಂಬಂಧಿಸಿದ ಚಿಕಿತ್ಸೆಯ ವಿವರಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ನಿಜ. ಕೇರಳದಲ್ಲಿರುವ ಸರಕಾರಿ ಆಸ್ಪತ್ರೆಯ ದಾಖಲಾತಿಗಳನ್ನು ನಾನೇ ಕೊಟ್ಟಿರುತ್ತೇನೆ. ಸದರಿ ದಾಖಲಾತಿಗಳಲ್ಲಿ ವೈದ್ಯರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಿ.ಪಿ.2 ರಂತೆ ಇರುವ ದಾಖಲೆಗಳು ನಾನೇ ಸೃಷ್ಟಿ ಮಾಡಿರುವ ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ. ಕೇರಳದಲ್ಲಿ ಪಡೆದುಕೊಂಡ ಆಸ್ಪತ್ರೆಯ ಚಿಕಿತ್ಸೆಯ ವಿವರಗಳು ನನಗೆ ಗೊತ್ತಿಲ್ಲ. ಕೇರಳ ಆಸ್ಪತ್ರೆಯವರು ಧಾರವಾಡ ಆಸ್ಪತ್ರೆಗೆ ಹೋಗಬೇಕೆಂದು ಶಿಫಾರಸ್ಸು ಮಾಡಿಲ್ಲ. ನಾನು ಜಂಬಗಿ ಆಸ್ಪತ್ರೆಯಲ್ಲಿ ಪಡೆದುಕೊಂಡ ಚಿಕಿತ್ಸೆಗೆ ಮತ್ತು ಅಪಘಾತಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಜಂಬಗಿ ಆಸ್ಪತ್ರೆಯಲ್ಲಿ ಯಾವ ದಿನಾಂಕ ಮತ್ತು ಸಮಯದಲ್ಲಿ ಹೋಗಿದ್ದೇನೆ ಎಂದು ನನಗೆ ಗೊತ್ತಿಲ್ಲ, ನಂತರ ಕೇಳಿ ತಿಳಿದುಕೊಂಡಿಲ್ಲ. ಗಾಯದ ಕುರಿತು ನನಗೆ ವೈದ್ಯರು ಕೇಳಲು ನನಗೆ ಪ್ರಜ್ಞೆ ಇರಲಿಲ್ಲ. ನಿ.ಪಿ.5 ರಂತೆ ಡಿಸಚಾರ್ಜ ಸಮರಿಯ ಪ್ರಕಾರ ದಿಃ13-01-2019 ರಂದು ನಾನು ಬಿದ್ದು ಗಾಯಮಾಡಿಕೊಂಡಿದ್ದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅಪಘಾತದ ಕಾರಣ ಗಾಯವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಆದ್ದರಿಂದ ಟೆಂಪೊದಲ್ಲಿ ಪ್ರಯಾಣ ಮಾಡುವಾಗ ಅಪಘಾತವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೇರಳದ ಕೊಟ್ಟಾಯಮ ಸರಕಾರಿ ಆಸ್ಪತ್ರೆಯವರು ನೀಡಿರುವ ಗಾಯದ ಪ್ರಮಾಣಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರಯಾಣ ಮಾಡಲಾರದ ಕಾರಣ ಟೆಂಪೊ ನಂಬರ ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಕೇರಳ ಜಿಲ್ಲಾ ಆಸ್ಪತ್ರೆಯಿಂದ ಆ್ಯಂಬುಲೆನ್ಸನಲ್ಲಿ ರೈಲ್ವೆ ನಿಲ್ದಾಣಕ್ಕೆ, ಅಲ್ಲಿಂದ ಮಂಗಳೂರಿಗೆ, ನಂತರ ಸ್ಲೀಪರ ಬಸ್ಸನಲ್ಲಿ ಧಾರವಾಡಕ್ಕೆ ಬಂದಿದ್ದು ಇರುತ್ತದೆ. ಈ ಕುರಿತು ದಾಖಲೆಗಳು ನನ್ನ ಹತ್ತಿರ ಇರುವುದಿಲ್ಲ, ಯಾರು ಇವುಗಳನ್ನು ಒದಗಿಸಿರುವ ಕುರಿತು ನನಗೆ ಗೊತ್ತಿಲ್ಲ. ಕೇರಳದಿಂದ ಮಂಗಳೂರಿಗೆ ಒಬ್ಬನೇ ಪ್ರಯಾಣಿಸಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಜಂಬಗಿ ಆಸ್ಪತ್ರೆಯಲ್ಲಿ ದಾಖಲಾತ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಲ್ಲಿ ಪಡೆದಿರುವ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ ಕುರಿತು ಹೇಳಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ನನಗೆ ಆದಂತಹ ಗಾಯಗಳನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ನ್ಯೂನತೆಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಂದುವರೆದ ಚಿಕಿತ್ಸೆ ಪಡೆದಿರುವ ಕುರಿತು ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅದರಂತೆ 3ನೇ ಖಂಡಿಕೆಯಲ್ಲಿರುವ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಈ ಮೊದಲಿನಂತೆ ನನ್ನ ಎಲ್ಲ ಕಾರ್ಯಗಳನ್ನು ಸರಳವಾಗಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಐಸಕ್ರೀಂ ಅಂಗಡಿಯಲ್ಲಿ ಕಮೀಷನ ತೆಗೆದುಕೊಂಡು ಕೆಲಸ ಮಾಡುತ್ತಿದ್ದೆ. ಸದರಿ ವಿಷಯ ಮತ್ತು ಆದಾಯ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ 31 ವರ್ಷ. ಈ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ಟೆಂಪೋದಲ್ಲಿ ಇರಲಾರದ ಕಾರಣ ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವು ಟೆಂಪೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಹೊರತು ಬಸ್ಸ

ಚಾಲಕನಿಂದ ಅಲ್ಲ ಎಂದರೆ ಸರಿಯಲ್ಲ. ಸದರಿ ಟೆಂಪೋದಲ್ಲಿ ಇರುವ ವ್ಯಕ್ತಿಗಳ ವಿವರಗಳನ್ನು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ಕೇರಳ ಬಸ್ಸಿನ ತಪ್ಪಿನಿಂದ ಅಪಘಾತವಾಗಲಾರದ ಕಾರಣ ಸದರಿಯವರು ನನಗೆ ಯಾವುದೇ ರೀತಿ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.